(5) ಉಳ್ಳಾಲ ವಿಧಾನಸಭಾಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವ

ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳು ಕಳೆದ 10 ವರ್ಷಗಳಿಂದ ತೀವ್ರ ಕುಡಿಯುವ ನೀರಿನ ಅಭಾವ ಎದುರಿಸುತ್ತಿದೆ. ಈ ಕ್ಷೇತ್ರದಲ್ಲಿ ಈಗಾಗಲೇ ಕೊಳವೆ ಬಾವಿಗಳು, ಕಿರುನೀರಾವರಿ ಯೋಜನೆ ಸಮಗ್ರ ಕುಡಿಯುವ ನೀರಿನ ಯೋಜನೆಗಳನ್ನು ಅಳವಡಿಸಿದ್ದರೂ, ತಾಂತ್ರಿಕ ವೈಫಲ್ಯದಿಂದಾಗಿ ಅಥವಾ ಅಶುದ್ಧ ನೀರಿನಿಂದಾಗಿ ಹೆಚ್ಚಿನ ಕಡೆಗಳಲ್ಲಿ ಕೊಳವೆ ಬಾವಿಗಳು ಕೇವಲ ಒಂದು ವರ್ಷಗಳವರೆಗೆ ಮಾತ್ರ ಕಾರ್ಯನಿರ್ವಹಿಸುತ್ತಿರುವುದರಿಂದ ಗ್ರಾಮಾಂತರ ಪ್ರದೇಶದ ಜನರು, ಕುಡಿಯುವ ನೀರಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೀವ್ರತರ ತೊಂದರೆಯನ್ನು ಎದುರಿಸಿ ತುಂಬಾ ಹತಾಶರಾಗಿದ್ದಾರೆ.

ಗ್ರಾಮಾಂತರ ಪ್ರದೇಶದ ಜನರಿಗೆ ಸಮೀಪದ ನೇತ್ರಾವತಿ ನದಿಯಿಂದ ನೀರು ಸರಬರಾಜು ಮಾಡುವ ಯೋಜನೆಯನ್ನು ಅನುಷ್ಠಾನಗೊಳಿಸಬೇಕೆಂದೂ, ಸರ್ಕಾರದ ಗಮನಕ್ಕೆ ಈ ವಿಚಾರ ಹಲವಾರು ಬಾರಿ ತಂದರೂ ನಿರ್ದಿಷ್ಟವಾದ ಯೋಜನೆಯ ಬಗ್ಗೆ ಯಾವುದೇ ನಿರ್ಧಾರತೆಗೆದುಕೊಳ್ಳದಿರುವ ಹಿನ್ನೆಲೆಯಲ್ಲಿ ಸರ್ಕಾರ ತಕ್ಷಣ ಉಳ್ಳಾಲ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಿಗೆ ಸಮೀಪದ ನೇತ್ರಾವತಿ ನದಿಯಿಂದ ಕುಡಿಯುವ ನೀರನ್ನು ಒದಗಿಸುವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿ ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತಿದ್ದೇನೆ.

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ಸಚಿವರು) (ಗ್ರಾಮೀಣಾಭಿವೃದ್ಧಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ ಉಳ್ಳಾಲ ಮತ್ತು ಸುತ್ತಲಿನ ಗ್ರಾಮಗಳಿಗೆ ನೇತ್ರಾವತಿ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡುವ ಕೋರಿಕೆಯನ್ನು ಪರಿಗಣಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಇವರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕಾರ್ಯಪಾಲಕ ಇಂಜಿನಿಯರು, ಮಂಗಳೂರು ಇವರಿಗೆ ಒಂದು ರೇಖಾ ಅಂದಾಜನ್ನು ತಯಾರಿಸಲು ಸೂಚಿಸಿದ್ದರು. ಕಾರ್ಯಪಾಲಕ ಇಂಜಿನಿಯರು ಮಂಗಳೂರು ಪಟ್ಟಣ ಮತ್ತು ಸುತ್ತಲಿನ 14 ಗ್ರಾಮಗಳಿಗೆ (ಈ ಗ್ರಾಮಗಳು ಸುಮಾರು ನೂರು ಚದರ ಕಿ.ಮಿ. ವಿಸ್ತೀರ್ಣದಲ್ಲಿದೆ) ನೇತ್ರಾವತಿ ನದಿಯಿಂದ ಕುಡಿಯುವ ನೀರು ಸರಬರಾಜು ಮಾಡಲು ರೂ. 31.00ಕೋಟಿಯ ರೇಖಾ ಅಂದಾಜನ್ನು ತಯಾರಿಸಿರುತ್ತಾರೆ. ಈ ಹದಿನಾಲ್ಕು ಗ್ರಾಮಗಳು ಕೆಳಗಿನಂತಿವೆ.

1. ಬೋಲಿಯಾರ್ 2. ಕೋನಾಜೆ 3. ಪಾವೂರ್ 4. ಹರೇಕಲ 5. ಅಂಬ್ಲಾ ಮೇಗೂರು 6. ಬೆಲ್ಮ 7. ಮನ್ ಜನಾಡಿ 8. ಮುನ್ನೂರು 9. ಪೆರುಮನ್ನೂರು 10. ಉಳ್ಳಾಲ 11. ಕೊಟಕರ್ 12. ಕಿನಿಯ 13. ತಲಪಾಡಿ 14. ಸೋಮೇಶ್ವರ

ಕಾರ್ಯಪಾಲಕ ಇಂಜಿನಿಯರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಗಳೂರು ಇವರು ಮಂಗಳೂರು ಮಹಾನಗರ ಪಾಲಿಕೆಯನ್ನು ಈ ಯೋಜನೆಗೆ ಸಂಬಂಧಪಟ್ಟಂತೆ ಸಮೀಕ್ಷೆಯನ್ನು ನಡೆಸಲು ಬೇಕಾಗಿರುವ ಹಣವನ್ನು ಠೇವಣಿಯಾಗಿಡಲು ಕೋರಿದ್ದಾರೆ.

ಈ ಮದ್ಯೆ ಈ ಅಂದಾಜಿನ ತಾಂತ್ರಿಕ ಸಾಧ್ಯತೆಯನ್ನು ಮತ್ತು ಈ ಗ್ರಾಮಗಳಿಗೆ ಈ ಯೋಜನೆಯಿಂದ ನೀರು ಸರಬರಾಜು ಆದ ಮೇಲೆ ಯೋಜನೆಯ ನಿರ್ವಹಣೆ

ವೆಚ್ಚದ ಬಗ್ಗೆ ಪರಿಶೀಲಿಸಲು ಪ್ರಧಾನ ಇಂಜಿನಿಯರ್, ಸಾರ್ವಜನಿಕ ಆರೋಗ್ಯ ತಾಂತ್ರಿಕ ವಲಯ ಇವರನ್ನು ಕೋರಲಾಗಿದೆ.

(6) ಗದಗ-ಬೆಟಗೇರಿಯಲ್ಲಿ ಗೃಹ ನಿರ್ಮಾಣ ಮಂಡಳಿ ವತಿಯಿಂದ ಮೂರು ಸಾವಿರ ಗೃಹಗಳ ನಿರ್ಮಾಣ

ಶ್ರೀ ಡಿ.ಆರ್. ಪಾಟೀಲ (ಗದಗ) : ಧಾರವಾಡ ಜಿಲ್ಲೆ ಗದಗ ಬೆಟಗೇರಿ ಅವಳಿ ನಗರದಲ್ಲಿ ಹೌಸಿಂಗ್ ಬೋರ್ಡಿನವರು ಮನೆಗಳನ್ನು ನಿರ್ಮಿಸಲು ಯೋಜನೆ ರೂಪಿಸಿತು. ಮನೆ ಬೇಡಿಕೆ ಇರುವವರಿಂದ ಅರ್ಜಿಗಳನ್ನು ಪತ್ರಿಕಾ ಜಾಹೀರಾತುಗಳ ಮೂಲಕ ಏಳು ವರ್ಷದ ಹಿಂದೆಯೇ ಆಹ್ವಾನಿಸಿತು. ಐದು ಸಾವಿರಕ್ಕೂ ಅಧಿಕ ಜನ ಮನೆಗಾಗಿ ಹೌಸಿಂಗ್ ಬೋರ್ಡಿಗೆ ಅರ್ಜಿ ಸಲ್ಲಿಸಿದ್ದಾರೆ.

ಮನೆ ನಿರ್ಮಾಣಕ್ಕೆ 400 ಎಕರೆ ಭೂಮಿಯ ಅವಶ್ಯಕತೆ ಇದ್ದು ಈಗಾಗಲೇ 75 ಎಕರೆ ಪ್ರದೇಶವನ್ನು ಗೃಹ ಮಂಡಳಿಯವರು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಇದನ್ನೂ 85 ಎಕರೆ ಬಗ್ಗೆ ಅವಾರ್ಡ್ ಆಗಿದ್ದು ಮಂಡಳಿ ಭೂಮಾಲೀಕರಿಗೆ ಪರಿಹಾರ ನೀಡಿ ಭೂಮಿ ಕಬ್ಜಾ ಪಡೆದುಕೊಳ್ಳಬೇಕಾಗಿದೆ.

75 ಎಕರೆ ಪ್ರದೇಶದಲ್ಲಿ 1300 ಮನೆಗಳ ನಿರ್ಮಾಣ ಮಾಡಲು ನಿರ್ಣಯಿಸಲಾಗಿದೆ. ಈಗ ಅವಾರ್ಡ ಆಗಿ ಉಳಿದ 85 ಎಕರೆ ಜಮೀನನ್ನು ಕಬ್ಜೆ ತೆಗೆದುಕೊಂಡು ಆ ಜಮೀನಿನಲ್ಲಿಯೂ ನಿವೇಶನ ರಚಿಸಿ ಮನೆ ಕಟ್ಟುವ ಕೆಲಸ ಪ್ರಾರಂಭಿಸಬೇಕಾಗಿದೆ. 1500 ಮನೆಗಳ ನಿರ್ಮಾಣ ಆಗಬೇಕಾಗಿದೆ. ಗೃಹ ಮಂಡಳಿ ಅನಗತ್ಯವಾಗಿ ವಿಳಂಬ ಮಾಡುವುದರಿಂದ ನಿರ್ಮಾಣ ವೆಚ್ಚ ಹೆಚ್ಚಾಗಿ ಜನರಿಗೆ ಭಾರವಾಗುವುದು. ಆದ್ದರಿಂದ ಈಗಾಗಲೇ ಭಾರಿ ವಿಳಂಬವಾಗಿರುವ ಗೃಹ ನಿರ್ಮಾಣ ಕೆಲಸವನ್ನು ಬೇಗನೇ ಆರಂಭಿಸಿ ಗದಗ-ಬೆಟಗೇರಿಯಲ್ಲಿ ಕನಿಷ್ಠ ಮೂರು ಸಾವಿರ ಮನೆಗಳನ್ನು ಕಟ್ಟಲು ಇದೇ ಹಣಕಾಸಿನ ವರ್ಷದಲ್ಲಿ ಕ್ರಮ ಕೈಗೊಳ್ಳಲು ಸಂಬಂಧಿಸಿದವರಿಗೆ ಆದೇಶಿಸಲು ರಾಜ್ಯ ವಸತಿ ಸಚಿವರಲ್ಲಿ ಕೋರುವೆ.

12.40 ಪಿ.ಎಂ

ಶ್ರೀ ಬಸವರಾಜ ರಾಯರೆಡ್ಡಿ (ವಸತಿ ಸಚಿವರು) : ಮಾನ್ಯ ಅಧ್ಯಕ್ಷರೇ, ಗದಗ್ ಬೆಟಗೇರಿ ನಗರ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸಲು 76.10 ಎಕರೆ ಭೂಮಿಯನ್ನು ಕರ್ನಾಟಕ ಗೃಹಮಂಡಳಿಯವರು ಈಗಾಗಲೇ ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಇನ್ನೂ 84.20 ಗುಂಟೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅವಾರ್ಡ್ ಹಂತದಲ್ಲಿದೆ. ಇತ್ತೀಚೆಗೆ ಉಚ್ಚನ್ಯಾಯಾಲಯದಲ್ಲಿ ದಿನಾಂಕ 28-8-1995ರ ತೀರ್ಮಾನದಂತೆ ಭೂಸ್ವಾಧೀನವನ್ನು ಮುಂದುವರಿಸಲು ಅನುವು ಮಾಡಿಕೊಟ್ಟಿರುವ ಮೇರೆಗೆ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ. ಮನೆಗಳ ನಿರ್ಮಾಣ ಮಾಡಲು ಬೇಡಿಕೆ ಸಮೀಕ್ಷೆಯನ್ನು 1988-89ರಲ್ಲಿ ನಿಲ್ಲಿಸಿರುವುದರಿಂದ ಸಾಕಷ್ಟು ಬೇಡಿಕೆ ಇರುವುದರಿಂದ ಸದ್ಯಕ್ಕೆ ಗೃಹ ಮಂಡಳಿಯ ಸ್ವಾಧೀನದಲ್ಲಿರುವ 76.10 ಗುಂಟೆ ಭೂಮಿಯಲ್ಲಿ ಹುಡ್ಕೋ ಸಂಸ್ಥೆಯಿಂದ ಸಾಲ ಪಡೆಯಲು ಯೋಜನೆಯನ್ನು ತಯಾರಿಸಲಾಗುತ್ತಿದೆ. ಮತ್ತು ಸಂಬಂಧಪಟ್ಟಂತಹ ಇಂಜನೀಯರ್‌ಗಳಿಗೆ ಅಂದಾಜುಗಳನ್ನು ಕೂಡ ತಯಾರಿಸಲು ಸೂಚಿಸಿದೆ. ಹಾಗೂ ಈ ಯೋಜನೆಗೆ ಸಂಬಂಧಪಟ್ಟಂತಹ ಇತರೆ ಕೆಲಸಗಳನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ. ಸದರಿ ಯೋಜನೆಯನ್ನು 1995-96ನೇ ಸಾಲಿನಲ್ಲಿ ಎಲ್ಲಾ ತರದ ವ್ಯವಸ್ಥೆಯನ್ನು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.